**ಪ್ರಧಾನ ಸಿ.ಜೆ. ಮತ್ತು ಜೆ ಎಂಎಫ್‌ಸಿ ನ್ಯಾಯಾಲಯ, ಮದ್ದೂರು**

ದಿಃ 02-04-2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ದೂರುದಾರರ ಪರ ಶ್ರೀ. ಡಿಕೆ ವಕೀಲರವರಿಂದಃ -**

ದೂರುದಾರರು ನನಗೆ ಪರಿಚಯವಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-1 ರ ಚೆಕ್ ನ್ನು ನನ್ನ ತಾಯಿ ಗೀತಾ ಎಂಬುವವರಿಗೆ ನೀಡಿದ ಬಗ್ಗೆ ಮತ್ತು ಸದರಿಯವರು ನನ್ನ ತಾಯಿಯಿಂದ ಚೆಕ್ ನ್ನು ಸ್ವೀಕರಿಸಿದ ಬಗ್ಗೆ ಯಾವುದೇ ದಾಖಲಾತಿ ಇಲ್ಲ. ನಿಪಿ-1 ರಲ್ಲಿರುವ ಸಹಿಯು ನನ್ನದು, ಸಾಕ್ಷಿ ಮುಂದುವರೆದು ಅದರಲ್ಲಿರುವ ಒಕ್ಕಣೆ ನಾನು ಬರೆದಿಲ್ಲ ಎನ್ನುತ್ತಾರೆ. ನಿಪಿ-1 ರ ಚೆಕ್ ನ್ನು ನಾನೇ ಸ್ವತಹಃ ದೂರುದಾರರಿಗೆ ನೀಡಿದ್ದರೂ ಕೂಡ ಸದರಿಯವರ ಪರಿಚಯವೇ ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಅರೆಸ್ಟ್ ವಾರೆಂಟ್ ಬಂದ ನಂತರ ಗೀತಾ ರವರು ಚೆಕ್ ನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ನಾನಾಗಲಿ, ನನ್ನ ತಾಯಿಯಾಗಲಿ ಪೊಲೀಸ್ ದೂರು ದಾಖಲಿಸಿಲ್ಲ. ಸದರಿ ಚೆಕ್ ನ್ನು ಗೀತಾ ರವರಿಗೆ ನೀಡದ ಕಾರಣ ನಾನಾಗಲಿ ಅಥವಾ ನನ್ನ ತಾಯಿಯಾಗಲಿ ಯಾವುದೇ ದೂರನ್ನು ಸದರಿ ಗೀತಾ ರವರ ವಿರುದ್ಧ ಹೂಡಿಲ್ಲ ಎಂದರೆ ಸರಿಯಲ್ಲ. ಶ್ರೀನಿವಾಸ್ ರವರಿಗೆ ಹಿಂದಿರುಗಿಸಬೇಕಾದ ಹಣದ ಬಾಧ್ಯತೆಯನ್ನು ತಪ್ಪಿಸಿಕೊಳ್ಳಲು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ಸದರಿ ವೇಳೆಯಲ್ಲಿ ವಿದ್ಯಾರ್ಥಿಯಾಗಿದ್ದು ಸಾಲದ ಅವಶ್ಯಕತೆ ಇರಲಿಲ್ಲ ಎಂದು ನಿಡಿ-1 ನ್ನು ಪ್ರಕರಣದ ಅನುಕೂಲತೆ ಪಡೆಯಲು ಹಾಜರುಪಡಿಸಿದ್ದು ಸದರಿ ವೇಳೆಯಲ್ಲಿ ದೂರುದಾರರಿಂದ ಸಾಲ ಪಡೆದಿದ್ದೆ ಎಂದರೆ ಸರಿಯಲ್ಲ.

ನ್ಯಾಯಾಲಯದ ಪ್ರಶ್ನೆ:- ಸದರಿ ನಿಡಿ-1 ರ ಕಾಲಕ್ಕೆ 18 ವರ್ಷ ಆಗಿತ್ತೋ ಇಲ್ಲವೂ ?

ಉತ್ತರಃ - 18 ವರ್ಷ ಆಗಿತ್ತು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ

(ಶ್ರೀಮತಿ ನಳಿನ ಎಸ್.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು,
ಮದ್ದೂರು